ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಜೇವರ್ಗಿಯದು ಕೇಳಿದ್ದಾರೆ. ಜೇವರ್ಗಿ ತಾಲ್ಲೂಕಿನ ವರವಿ ಗ್ರಾಮದ ಶ್ರೀಮತಿ ರಾಧಾಬಾಯಿ ಗಂಡ ಶಿವಪ್ಪ ವರವಿ ಇವರ ಪಟ್ಟಾ ಜಮೀನು ಸರ್ವೆ ನಂ.22/2 ರಲ್ಲಿ 2 ಎಕರೆ ಜಮೀನನ್ನು ಸಾರ್ವಜನಿಕರ ಸ್ಮಶಾನದ ಉದ್ದೇಶಕ್ಕಾಗಿ ಖರೀದಿಸುವ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಲಾಗಿದ್ದು, ಸದರಿ ಪ್ರಸ್ತಾವನೆಯು ಮಾತ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಡಾ॥ ಎ.ಬಿ. ಮಾಲಕರೆಡ್ಡಿ : ಅಜೀಬ್ ಸವಾಲ್, ಅಜೀಬ್ ಜವಾಬ್, ಅವರು ಅಫಜಲಪುರ ತಾಲ್ಲೂಕಿನ ಹಳ್ಳಿಯ ಬಗ್ಗೆ ಕೇಳಿದ್ದಾರೆ. ಅದರೆ ಸಚಿವರೇನು ಉತ್ತರವನ್ನು ಕೊಟ್ಟಿದ್ದಾರೆಂದರೆ ಜೇವರ್ಗಿ ತಾಲ್ಲೂಕಿನಲ್ಲಿ ಈ ಸರ್ವೆ ನಂಬರ್ ಇದೆ, ಅದನ್ನು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಲಾಗಿದೆ ಎಂದು ಕೊಟ್ಟಿದ್ದಾರೆ.

ಅಧ್ಯಕ್ಷರು : ಪಕ್ಕದಲ್ಲಿ ಇದ್ದರೂ ಇರಬಹುದು, ಬಹುಶಃ ಅವರು ಕೇಳುವ ಅಫಜಲಪುರ ತಾಲ್ಲೂಕಿನ ಪಕ್ಕದಲ್ಲಿ ಅದು ಇರಬಹುದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮೇಲ್ಗಡೆಯದು ಕೊಟ್ಟಿದ್ದೇನೆ. ಅವರ ಕ್ಷೇತ್ರಕ್ಕೆ ಬೇಕಾದರೆ ಅಲ್ಲಿಯೂ ಕೂಡ ಸಾರ್ವಜನಿಕರ ರುದ್ರಭೂಮಿ ಉದ್ದೇಶಕ್ಕಾಗಿ ಅಗತ್ಯವಿರುವ ಗ್ರಾಮಗಳ ವಿವರ ಖಾಸಗಿ ಜಮೀನಿನ ಮಾಲೀಕರು ಮಾರಾಟ ಮಾಡಲು ಒಪ್ಪಿರುವ ಒಪ್ಪಂದದ ಪತ್ರ, ಸದರಿ ಜಮೀನಿನ ಮಾರ್ಗಸೂಚಿ ಬೆಲೆ, ಜಮೀನಿನ ವಿಸ್ತೀರ್ಣ ಹಾಗೂ ಜಮೀನಿನ ಸರ್ವೆ ನಂಬರ್ ವಿವರಗಳನ್ನೊಳಗೊಂಡಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ. ಪ್ರಸ್ತಾವನೆಯನ್ನು ಸ್ವೀಕರಿಸಿದ ತಕ್ಷಣ ಪರಿಶೀಲಿಸಿ ಹಣ ಬಿಡುಗಡೆಗೆ ಮಂಜೂರಾತಿ ಆದೇಶ ಹೊರಡಿಸಲಾಗುವುದು.

ಅಧ್ಯಕ್ಷರು : ಕೋಳಿವಾಡ್ ಅವರದ್ದಕ್ಕೆ ಉತ್ತರ ಬಂದಿಲ್ಲ. ಆಮೇಲೆ ಸಿ.ಟಿ.ರವಿಯವರು ಕೇಳುವುದು.

10. ವಿಷಯ: ಗ್ರಾಮೀಣ ಪುನರ್ವಸತಿ ಯೋಜನೆಯಡಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದ್ದೋಶ ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ನೀಡಲಾಗುತ್ತಿರುವ ಗೌರವಧನವನ್ನು ಹೆಚ್ಚಿಸುವ ಮತ್ತು ಇವರುಗಳನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪುನರ್ವಸತಿ ಯೋಜನೆಯಡಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ನೀಡಲಾಗುತ್ತಿರುವ ಗೌರವಧನವನ್ನು ಹೆಚ್ಚಿಸುವ ಮತ್ತು ಇವರುಗಳನ್ನು ಖಾಯಂಗೊಳಿಸುವ ಬಗ್ಗೆ ಗಮನ ಸೆಳೆಯುತ್ತೇನೆ.

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ

1. 2000–2001ನೇ ಸಾಲಿನಲ್ಲಿ ಭಾರತ ಸರ್ಕಾರವು ಅಂಗವಿಕಲರಿಗಾಗಿ ಪುನರ್ವಸತಿ ಸೇವೆಗಳನ್ನು ಒದಗಿಸುವ ರಾಷ್ಟ್ರೀಯ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮವನ್ನು ರೂಪಿಸಿ, 2004–2005ನೇ ಸಾಲಿನವರೆಗೆ ಕೇಂದ್ರ ಸರ್ಕಾರದ ಅನುದಾನದೊಂದಿಗೆ ಮೈಸೂರು, ತುಮಕೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿತ್ತು.

2 ಕೇಂದ್ರ ಸರ್ಕಾರವು ಈ ಯೋಜನೆಯನ್ನು ರಾಜ್ಯ ಸರ್ಕಾರದ ವತಿಯಿಂದ ಅನುಷ್ಠಾನಗೊಳಿಸಲು ಸೂಚಿಸಿದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಅಂಗವಿಲಕರ ಗ್ರಾಮೀಣ ಪುನರ್ವಸತಿ ಯೋಜನೆಯನ್ನು 2007–08 ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. (ಸರ್ಕಾರದ ಅದೇಶ ಸಂ.ಮಮಇ 237 ಪಿಹೆಚ್‌ಪಿ 2007, ದಿ: 16–08–2007)

3. ರಾಜ್ಯದಲ್ಲಿರುವ 5629 ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ರೂ.750/– ರಂತೆ ಮತ್ತು ಪ್ರತಿ ತಾಲ್ಲೂಕಿಗೆ ಒಬ್ಬರಂತೆ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ರೂ. 2000/– ಗೌರವಧನದ ಆಧಾರದ ಮೇಲೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿಯಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

4. ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಹೊಂದಿದ್ದು, ಅವರುಗಳು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿಕಲಚೇತನರ ಸಮೀಕ್ಷೆ ನಡೆಸಿ ಅವರುಗಳ ಪುನರ್ವಸತಿಗೆ ಅಗತ್ಯವಾದ ಸೇವೆಗಳನ್ನು ಗುರುತಿಸಿ ಆ ಸೇವೆಗಳನ್ನು ವಿವಿಧ ಇಲಾಖೆಗಳ ಸಮನ್ವಯತೆಯಲ್ಲಿ ಅವರುಗಳಿಗೆ ಸೇವೆಗಳನ್ನು ಒದಗಿಸಲು ಕ್ರಮವಹಿಸುತ್ತಿದ್ದಾರೆ.

5. ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು ಪದವಿ ವಿದ್ಯಾರ್ಹತೆಯೊಂದಿಗೆ ಕರ್ತವ್ಯ ನಿರ್ವಹಿಸುತ್ತಿದ್ದು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಿ ಪ್ರಗತಿ ವರದಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುತ್ತಿದ್ದಾರೆ.

6. ಈ ಯೋಜನೆಯಡಿ, ನವೆಂಬರ್ 2014ಕ್ಕೆ 30 ಜಿಲ್ಲೆಗಳಲ್ಲಿ ಒಟ್ಟು 5629 ಗ್ರಾಮ ಪಂಚಾಯಿತಿಗಳಲ್ಲಿ 4761 ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿರುವವರು, 176 ತಾಲ್ಲೂಕು ಪಂಚಾಯಿತಿಯಲ್ಲಿ 165 ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿರುವವರು.

7. ಈ ಯೋಜನೆಯಡಿ ಗೌರವಧನ ಆಧಾರದ ಮೇಲೆ ನೇಮಿಸಲಾದ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ವಿವಿಮೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಈ ಹಿಂದೆ ನೀಡುತ್ತಿದ್ದ

ಗೌರವಧನ ಅತ್ಯಲ್ಪವಾದುದರಿಂದ ದಿನಾಂಕ 20–12–2012 ರಿಂದ ಅನ್ವಯವಾಗುವಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ರೂ.1500/– ಗಳ ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ರೂ. 4000/–ಗಳ ಗೌರವಧನವನ್ನು ಹೆಚ್ಚಿಸಿದೆ. (ಸರ್ಕಾರದ ಆದೇಶ ಸಂ: ಮಮಇ 150 ಪಿಹೆಚ್‌ಪಿ 2012, ದಿ:20–12–2012)

8. ಗ್ರಾಮೀಣ ಪುನರ್ವಸತಿ ಯೋಜನೆಯಡಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಮತ್ತು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ ಗೌರವಧನದ ಆಧಾರದ ಮೇಲೆ ಪಡೆದಿರುವುದರಿಂದ ಇವರ ಸೇವೆಯನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಗ್ರಾಮೀಣ ಪುನರ್ವಸತಿ ಯೋಜನೆಯಡಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಮತ್ತು ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರು ಇತ್ತೀಚೆಗೆ ಸಲ್ಲಿಸಿರುವ ಮನವಿಗಳಲ್ಲಿ ಅವರುಗಳಿಗೆ ಪ್ರಸ್ತುತ ನೀಡುತ್ತಿರುವ ಗೌರವಧನ ಅತೀ ಕಡಿಮೆಯಾಗಿರುವುದರಿಂದ ಮತ್ತು ಇತ್ತೀಚಿನ ದಿನಗಳಲ್ಲಿ ಎಲ್ಲಾ ರೀತಿಯ ಬೆಲೆಗಳು ಹೆಚ್ಚಾಗಿರುವುದರಿಂದ ಜೀವನ ನಿರ್ವಹಣೆ ಕಷ್ಟ ಸಾಧ್ಯವಾಗಿದ್ದು, ಗೌರವಧನವನ್ನು ಹೆಚ್ಚಿಸಲು ಕೋರಿರುತ್ತಾರೆ. ಇವರುಗಳ ಕೋರಿಕೆಯನ್ನು ಪರಿಶೀಲಿಸಲಾಗುವುದು.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, 2012 ರಲ್ಲಿ ಏನು ಗೌರವಧನವಿತ್ತು ಅದನ್ನು ಉತ್ತರದಲ್ಲಿ ಹೇಳಿದ್ದಾರೆ, ಇವತ್ತಿನ ಅವಶ್ಯಕತೆಗನುಗುಣವಾಗಿ ಮುಂದೆ ಹೆಚ್ಚು ಮಾಡುವುದರ ಬಗ್ಗೆ ಸ್ಪಷ್ಟಪಡಿಸಿಲ್ಲ ಮತ್ತು ಖಾಯಂಗೊಳಿಸಲು ಬರುವುದಿಲ್ಲವೆಂದು ಹೇಳಿದ್ದಾರೆ. ಮಾನವಿಯ ನೆಲೆಯಲ್ಲಿ ಯೋಚನೆ ಮಾಡಬೇಕು. ಖಾಯಂ ಆಗುತ್ತದೆಂದು ಅವರಿಗೆ ಹೆಣ್ಣು ಕೊಟ್ಟವರ ಗತಿ ಏನಾಗಬೇಕು, ಅದಕ್ಕೆ ಏನಾದರೂ ಮಾಡಬೇಕಲ್ಲಾ ?

ಅಧ್ಯಕ್ಷರು : ಅದೆಲ್ಲಾ ಬೇಡ, ಗೌರವಧನ ಹೆಚ್ಚಿಸುವ ಬಗ್ಗೆ ಮಾನ್ಯ ಸಚಿವರೆ ಕೇಳಿದ್ದಾರೆ ನೋಡಿ.

ಶ್ರೀಮತಿ ಉಮಾಶ್ರೀ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಂಗವಿಕಲರ ಪುನರ್ವಸತಿಗಾಗಿ ಇವರುಗಳನ್ನು ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ VRW ಮತ್ತು MRW ಎನ್ನುವ ಕಾರ್ಯಕರ್ತರನ್ನು ನಾವು ನೇಮಿಸಿದ್ದೇವೆ. ಇದು ಮೊದಲು ಕೇಂದ್ರ ಸರ್ಕಾರದಿಂದ ಆದದ್ದು ನಂತರ ರಾಜ್ಯ ಸರ್ಕಾರಗಳೆ ಮಾಡಬೇಕೆನ್ನುವ ಸೂಚನೆ ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮಾಡುತ್ತಿರುವುದು. ಈ ಹಿಂದೆ ಗ್ರಾಮೀಣ ಭಾಗದಲ್ಲಿ ಮಾಡುವ ಕಾರ್ಯಕರ್ತರಿಗೆ ರೂ. 750 ಇತ್ತು. ಹಾಗೆ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ರೂ.2000 ಇತ್ತು. ಮತ್ತೆ 2008ರಲ್ಲಿ ಇವರಿಗೆ ರೂ.750 ಇದ್ದದ್ದನ್ನು ರೂ. 1,500ಕ್ಕೆ ಏರಿಸಿದೆ. ಹಾಗೆ ರೂ. 2,000 ಇದ್ದದ್ದನ್ನು ರೂ. 4000 ಕ್ಕೆ ಏರಿಸಿದೆ.

ಮತ್ತೆ ಈ ಸಲ ಏರಿಸಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಹಾಗೂ ಆ ವಿಕಲಚೇತನರ ಬೇಡಿಕೆಯೂ ಇದೆ. ನಾವು ಅದನ್ನು ಪರಿಶೀಲನೆ ಮಾಡುತ್ತೇವೆ.

11. ವಿಷಯ : ಕಾರ್ಮಿಕ ಮಂಡಳಿಯು ನಿರ್ಲಕ್ಷದಿಂದಾಗಿ ಕಾರ್ಮಿಕರಿಗೆ ಸಂಬಂಧಿಸಿದ ಯೋಜನೆಗಳು ಕಾರ್ಮಿಕರಿಗೆ ದೊರೆಯುತ್ತಿಲ್ಲ ಎನ್ನುವ ಬಗ್ಗೆ.

ಶ್ರೀ ಸುನಿಲ್ ಕುಮಾರ್ ವಿ. (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕರ ಅಭಿವೃದ್ಧಿಗಾಗಿ ಹಲವಾರು ಸೌಲಭ್ಯಗಳು/ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಕಾರ್ಖಾನೆಗಳಲ್ಲಿ ದುಡಿಯುವ ಬಹುತೇಕ ಕಾರ್ಮಿಕರು ಈ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಕಾರ್ಖಾನೆಗಳು ಕಾನೂನಿನ ಪ್ರಕಾರ ಕಾರ್ಮಿಕರಿಗೆ ಕೊಡಬೇಕಾಗಿರುವ ಸೌಲಭ್ಯಗಳನ್ನು ಕೊಡುತ್ತಿಲ್ಲದಿರುವುದರಿಂದ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳೂ, ಸೌಲಭ್ಯ ಪಡೆಯಲು ಬೇಕಾದ ಅರ್ಹತೆಗಳು ಸಲ್ಲಿಸಬೇಕಿರುವ ದಾಖಲೆಗಳು ಹಾಗೂ ಯಾರನ್ನು ಸಂಪರ್ಕಿಸಬೇಕು ಎಂಬ ಮಾಹಿತಿಯ ಕೊರತೆಯಿಂದಾಗಿ ಕಾರ್ಮಿಕರೂ ಸಹ ತಮ್ಮ ಪಾಲಿನ ಹಕ್ಕನ್ನು ಪಡೆಯಲು ಸಾಧ್ಯವಾಗುತ್ತಿಲ್ಲದಿರುವುದರಿಂದ ಈ ಎಲ್ಲಾ ಸೌಲಭ್ಯಗಳನ್ನು ದೊರಕಿಸಲು ಇರುವ ಕಾರ್ಮಿಕ ಮಂಡಳಿಯ ನಿರ್ಲಕ್ಷ್ಯದಿಂದಾಗಿ ಯೋಜನೆಗಳು ಕಾರ್ಮಿಕರಿಗೆ ದೊರೆಯುತ್ತಿಲ್ಲದಿರುವ ಬಗ್ಗೆ ಮಾನ್ಯ ಕಾರ್ಮಿಕರ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್ (ಮಾನ್ಯ ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೆ, ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಸಂಘಟಿತ ಕಾರ್ಮಿಕರಾಗಿದ್ದು, ಕಾರ್ಖಾನೆಗಳ ಕಾಯ್ದೆ 1948 ರನ್ವಯ ಕೆಲಸದ ಅವಧಿ, ವಾರದ ರಜೆ, ಸುರಕ್ಷತಾ ಮತ್ತು ಆರೋಗ್ಯ ಕ್ರಮಗಳು ಅನ್ವಯವಾಗುತ್ತಿದ್ದು ಕೆಲಸಗಾರರ ಸಂಖ್ಯೆಗೆ ಅನುಗುಣವಾಗಿ ಕ್ಯಾಂಟೀನ್, ವಿಶ್ರಾಂತಿ ಕೊಠಡಿ, ಆಂಬುಲೆನ್ಸ್, ಬಾಲವಾಡಿ ಇನ್ನಿತರ ಸೌಲಭ್ಯಗಳನ್ನು ಪಡೆಯಲು ಅವಕಾಶ ಇರುತ್ತದೆ. ಎಲ್ಲಾ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರದ ಇ ಎಸ್.ಐ. ಕಾಯ್ದೆ ಅನ್ವಯವಾಗುತ್ತಿದ್ದರೂ ಸಹ ಅನುಸೂಚಿತ ಪ್ರದೇಶಗಳಲ್ಲಿನ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಉಚಿತ ಚಿಕಿತ್ಸೆ ಮತ್ತು ವಿಮಾ ಸೌಲಭ್ಯಗಳು ದೊರಕುತ್ತವೆ. ಕೇಂದ್ರ ಸರ್ಕಾರದ ಭವಿಷ್ಯ ನಿಧಿ ಕಾಯ್ದೆ ಕಾರ್ಖಾನೆಗಳಿಗೂ ಸಹ ಅನ್ವಯವಾಗುತ್ತಿದ್ದು, ಅದರಡಿ ರೂಪಿಸಿರುವ ಯೋಜನೆಗಳ ಪ್ರಕಾರ ಸೌಲಭ್ಯಗಳು ದೊರಕುತ್ತವೆ. ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ ಕಾರ್ಮಿಕರಿಗೂ ಸಹ ಮೇಲೆ ವಿವರಿಸಿರುವಂತೆ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಅನುಸೂಚಿತ ಉದ್ದಿಮೆಗಳಿಗೆ ಸರ್ಕಾರ ಕನಿಷ್ಟ ವೇತನ ನಿಗದಿಪಡಿಸಿದ್ದು, ಕನಿಷ್ಟ ವೇತನಕ್ಕಿಂತ ಕಡಿಮೆ ವೇತನ ಪಾವತಿಸಿದಲ್ಲಿ ಕಾರ್ಮಿಕರಾಗಲೀ, ಅಥವಾ ಕಾರ್ಮಿಕ ಪ್ರತಿನಿಧಿಗಳು ಅಥವಾ ಕಾರ್ಮಿಕ